## ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇಲ್ಲಿ ದಿನಗೂಲಿ ನೌಕರರನ್ನು ಖಾಯಂ ಮಾಡುವುದು

1417 (1778) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ದೊಡ್ಡಬಾತಿ ಇಲ್ಲಿ ದಿನಗೂಲಿ ಮೇಲೆ ಕೆಲಸಕ್ಕೆ ತೆಗೆದುಕೊಂಡಿರುವ ಕಾರ್ಮಿಕರ ಸಂಖ್ಯೆ ಎಷ್ಟು ಕಳೆದ 3 ವರ್ಷದ ಅಂತ್ಯಕ್ಕೆ ಇದ್ದಂತೆ ವಿವರ ನೀಡುವುದು;

ಆ) ಇವರುಗಳಿಗೆ ನೀಡುತ್ತಾ ಬಂದಿರುವ ದಿನಗೂಲಿ ವೇತನವೆಷ್ಟು?

ಇ) ಹತ್ತಾರು ವರ್ಷಗಳಿಂದ ದುಡಿಯುತ್ತಿರುವ ಇವರನ್ನು ಖಾಯಂ ಮಾಡುವ ವಿಚಾರ ಸರ್ಕಾರಕ್ಕೆ ಇದೆಯೇ; ಇದ್ದಲ್ಲಿ ಯಾವಾಗ ಖಾಯಂ ಮಾಡಲಾಗುವುದು?

ಈ) ಇಲ್ಲದೇ ಇದ್ದಲ್ಲಿ ಈ ಬಗ್ಗೆ ಯಾವಾಗ ಯೋಜಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಕಳೆದ ಮೂರು ಹಂಗಾಮುಗಳಿಗೆ ತೆಗೆದುಕೊಂಡ ದಿನಗೂಲಿ ಕಾರ್ಮಿಕರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. 99-2000ನೇ ಸಾಲಿನಲ್ಲಿ - 170 ಜನ ದಿನಗೂಲಿ ಕಾರ್ಮಿಕರು
2. 2000-01ನೇ ಸಾಲಿನಲ್ಲಿ - 164 ಜನ ದಿನಗೂಲಿ ಕಾರ್ಮಿಕರು
3. 2001-02ನೇ ಸಾಲಿನಲ್ಲಿ - 150 ಜನ ದಿನಗೂಲಿ ಕಾರ್ಮಿಕರು

ಆ) ದಿನಗೂಲಿ ವೇತನವು ಈ ಕೆಳಕಂಡಂತೆ ಇರುತ್ತದೆ (ಪ್ರತೀ ದಿನಕ್ಕೆ)

1. 99-2000 ರಲ್ಲಿ - 45.00 ರಿಂದ 50.00 ರೂ.
2. 2000-01 ರಲ್ಲಿ - 45.00 ರಿಂದ 50.00 ರೂ.
3. 2001-02 ರಲ್ಲಿ - 60.00 ರಿಂದ 65.00 ರೂ.

ಇ) ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯು ಬಿಕ್ಕಟ್ಟಿನಿಂದ ಕೂಡಿರುವುದರಿಂದ ಇವರನ್ನು ಖಾಯಂ ಮಾಡಲು ಸಾಧ್ಯವಾಗಿರುವುದಿಲ್ಲ.

ಈ) ಸದ್ಯಕ್ಕೆ ಆ ಯೋಜನೆ ಇರುವುದಿಲ್ಲ.

## ಭದ್ರ ಸಹಕಾರಿ ಸಕ್ಕರೆ ಕಾರ್ಖಾನೆಯ ಬೈಲಾ

1418 (1779) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡ ಬಾತಿ ಇದು ಸ್ಥಾಪನೆ ಆದದ್ದು ಯಾವಾಗ?

ಆ) ಆ ಸಂದರ್ಭದಲ್ಲಿ ಸದರಿ ಕಾರ್ಖಾನೆಯ ಕಬ್ಬು ಬೆಳೆಯುವ ಸದಸ್ಯರ ತರಗತಿಯಾದ "ಎ" ತರಗತಿ ಸದಸ್ಯರಾಗಲು ಇದ್ದಂತಹ ಅರ್ಹತೆಗಳೇನು? ಮಾನದಂಡಗಳೇನು, ಷರತ್ತುಗಳೇನು ಮತ್ತು ಅವರುಗಳಿಗಿದ್ದ ಹಕ್ಕು ಬಾಧ್ಯತೆಗಳೇನು?

ಇ) ಸದರಿ ಷರತ್ತುಗಳನ್ನು ಪಾಲಿಸದೇ ಇದ್ದಲ್ಲಿ ಹಕ್ಕು ಬಾಧ್ಯತೆಗಳ ಮೇಲೆ ಆಗುವ ಪರಿಣಾಮಗಳೇನು?

ಈ) ಸದರಿ ಕಾರ್ಖಾನೆಯ ಸ್ಥಾಪನೆ ಸಮಯದಲ್ಲಿದ್ದ ಮತ್ತು ಈಗ ಚಾಲ್ತಿಯಲ್ಲಿರುವ ಬೈಲಾ ಪ್ರತಿಗಳನ್ನು ಒದಗಿಸುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ದಿನಾಂಕ 8-5-1968ರಲ್ಲಿ ನೊಂದಣಿಯಾಗಿರುತ್ತದೆ.

ಆ) ಕಾರ್ಖಾನೆಯ ಬೈಲಾ ನಂ.10(ಬಿ) ರಲ್ಲಿ ವಿವರಗಳನ್ನು ನಮೂದಿಸಿರುತ್ತದೆ.

ಇ) ಮೇಲೆ ತಿಳಿಸಿರುವಂತೆ ಬೈಲಾ ಸಂ.10-ಬಿ ಪ್ರಕಾರ ಸದಸ್ಯರು ತನ್ನ ವಿಶೇಷಾಧಿಕಾರ ಅಥವಾ ಹಕ್ಕುಗಳು ಅಥವಾ ಬೆಳೆದ ಕಬ್ಬನ್ನು ಕಾರ್ಖಾನೆಗೆ ಒದಗಿಸುವ ಹಕ್ಕು ಚುನಾಯಿಸುವ ಹಕ್ಕು ಹೊಂದಿರುತ್ತಾನೆ.

ಈ) ಬೈಲಾ ಪ್ರತಿಗಳು ಕಾರ್ಖಾನೆಯಲ್ಲಿ ಲಭ್ಯವಿರುತ್ತವೆ.

## ರಾಜ್ಯದಲ್ಲಿ ನುಸಿಪೀಡೆ ಪರಿಹಾರ

1419 (1678) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

a) ರಾಜ್ಯದಲ್ಲಿ ನುಸಿಪೀಡೆ ಸಂಬಂಧ ಸಿಂಪಡಿಸಲಾದ ಔಷಧಿಯಿಂದ ನಾಶನಾಗಿರುವ ಒಟ್ಟು ತೆಂಗಿನ ಮರಗಳು ಎಷ್ಟು?

b) ಈ ಸಂಬಂಧ ನಾಶವಾದ ತೆಂಗಿನ ಮರಗಳ ಮಾಲೀಕರಾದ ರೈತರಿಗೆ ಸರಕಾರ ವತಿಯಿಂದ ಏನು ಪರಿಹಾರ ನೀಡಲಾಗಿದೆ? ನೀಡಿದೇ ಇದ್ದಲ್ಲಿ ಕಾರಣವೇನು?

c) ಈ ಔಷಧಿಯನ್ನು ಶಿಫಾರಸ್ಸು ಮಾಡಿದ ಸಂಸ್ಥೆ ಅಥವಾ ವ್ಯಕ್ತಿಗಳ ವಿರುದ್ಧ ಸರ್ಕಾರದ ವತಿಯಿಂದ ಏನು ಕ್ರಮ ಕೈಗೊಳ್ಳಲಾಗಿದೆ?

d) ಕೈಗೊಳ್ಳದೇ ಇದ್ದಲ್ಲಿ ಕಾರಣವೇನು?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

a) ತಂಗಿನ ಮರಗಳು ನಾಶವಾಗಿರುವುದಿಲ್ಲ.

b) ಉದ್ಭವಿಸುವುದಿಲ್ಲ.

c) ಉದ್ಭವಿಸುವುದಿಲ್ಲ.

d) ಉದ್ಭವಿಸುವುದಿಲ್ಲ.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವೆನಿಲ್ಲಾ ಬೆಳೆಗಳ ವಿತರಣೆ

1421 (1683) ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೋಟಗಾರಿಕೆಯಿಂದ ವಿತರಿಸಲ್ಪಡಬೇಕಾದ ವೆನಿಲ್ಲಾಗಿಡಗಳ ಬಗ್ಗೆ ನಡೆದಿರುವ ಅಕ್ರಮಗಳು ಸರ್ಕಾರದ ಗಮನಕ್ಕೆ ಬಂದಿವೆಯೇ?

ಆ) ವೆನಿಲ್ಲಾ ಗಿಡಗಳನ್ನು ಸಮಯಕ್ಕೆ ಸರಿಯಾಗಿ ರೈತರಿಗೆ ವಿತರಿಸದೇ ಇರಲು ಕಾರಣವೇನು?

ಶ್ರೀ ಎಂ. ಶಿವಣ್ಣ

ಅ) ಇಲ್ಲ

ಆ) ವೆನಿಲ್ಲಾಗಿಡಗಳನ್ನು ಸಕಾಲದಲ್ಲಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ.